ಹೊತ್ತು ಇರಲು ಹೆದರ್ತಾರೆ. ಭಯದಿಂದ ಅವರ ಗಂಟಲು, ತುಟಿ ಒಣಗಿರುತ್ತೆ. ಅವರು ನಿನ್ನ ಥರಾ ಹೀಗೆ ರೋಗಿಗಳ ಹತ್ರ ಹೋಗೋದೇ ಇಲ್ಲ. ನಿನ್ನ ಹಾಗೆ ಯಾರು ತಾನೇ ಇಷ್ಟೆಲ್ಲಾ ಹೆಣಗಾಡ್ತಾರೆ! ಭಾಗೂ, ಆ ದೇವರು ನಿನ್ನನ್ನ ಕಾಪಾಡಲಿ ಅಂತ ಬೇಡಿಕೊಳ್ತೀನಿ. ನೀನು ಈ ಸ್ವಾರ್ಥಿ ಮನುಷ್ಯನಿಗೆ ಎಷ್ಟೊಂದು ಸೇವೆ ಮಾಡ್ತ ಇದ್ದೀಯ!'

ಭಾಗು ತಲೆ ಬಗ್ಗಿಸಿ ಮುಂಡಾಸಿನ ಒಂದು ಕೊನೆಯನ್ನು ಮುಖದ ಮೇಲಿಂದ ಸರಿಸಿ, ಶರಾಬಿನಲ್ಲಿ ಮಿಂದೆದ್ದಂತಿದ್ದ ಮುಖವನ್ನು ತೋರಿಸುತ್ತಾ, 'ಸ್ವಾಮೀ! ನಾನು ಯಾವುದಕ್ಕೆ ಲಾಯಕ್ಕು? ನನ್ನಿಂದ ಯಾರಿಗಾದ್ರೂ ಪ್ರಯೋಜನ ಆದ್ರೆ ಸಾಕು. ನನ್ನ ಈ ಕೆಲಸಕ್ಕೆ ಬಾರದ ದೇಹ ಯಾರಿಗಾದ್ರು ಉಪಯೋಗ ಆದ್ರೆ, ಅದಕ್ಕಿಂತ ಭಾಗ್ಯ ಇನ್ನೇನು ಬೇಕು?! ಸ್ವಾಮೀ, ಹಿರಿಯ ಪಾದ್ರಿ ಲೊಬೊ ಅವರು ಪ್ರಚಾರ ಮಾಡಲು ಆಗಾಗ್ಗೆ ನಮ್ಮ ಓಣಿಗೆ ಬರ್ತಾ ಇರ್ತಾರೆ. ಅವರು ಹೇಳ್ತಾರೆ – ರೋಗಿಗಳಿಗೆ ಸೇವೆ ಮಾಡಲು ನಮ್ಮ ಜೀವನವನ್ನು ಪಣವಾಗಿಡುವುದನ್ನು ದೈವ ಸ್ವರೂಪಿ ಯೇಸು ಕ್ರಿಸ್ತನು ಕಲಿಸುತ್ತಾನೆ ಅಂತ. ಅದು ನನಗೆ ಅರ್ಥ ಆಗಿದೆ'.

ನಾನು ಭಾಗುವಿನ ಧೈರ್ಯವನ್ನು ಹೊಗಳಬೇಕೆಂದುಕೊಂಡೆ. ಆದರೆ ಮುಂದಾಗಬಹುದಾದ ಅನಾಹುತವನ್ನು ನೆನಸಿಕೊಂಡು ಹೊಗಳಲಿಲ್ಲ. ಅವನ ಬದುಕಿನ ಸದಾಚಾರ, ಸಂತೃಪ್ತಿಗಳನ್ನು ನೋಡಿ ನನ್ನ ಹೃದಯದಲ್ಲಿ ಒಂದು ಭಾವನಾತ್ಮಕ ಬಿರುಗಾಳಿ ಹುಟ್ಟಿತು. ಇಂದು ಕ್ವಾರಂಟೈನ್‌ನಲ್ಲಿ ಮನಃಪೂರ್ವಕವಾಗಿ ಕೆಲಸ ಮಾಡುವ ಮೂಲಕ ಬಹಳಷ್ಟು ರೋಗಿಗಳನ್ನು ಸಾವಿನ ದವಡೆಯಿಂದ ರಕ್ಷಿಸಬೇಕು ಮತ್ತು ಅವರಿಗೆ ಸಾಂತ್ವನ ಹೇಳಲು ನಾನು ನನ್ನ ಜೀವನವನ್ನು ಪಣವಾಗಿಡಬೇಕು ಎಂದು ನಿರ್ಧರಿಸಿದೆ. ಆದರೆ ಹೇಳುವುದಕ್ಕೂ ಮಾಡುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ! ಕ್ವಾರಂಟೈನ್‌ಗೆ ಹೋಗಿ, ರೋಗಿಗಳ ಭೀಕರ ಸ್ಥಿತಿಯನ್ನು ನೋಡಿದಾಗ ಮತ್ತು ಅವರ ಬಾಯಿಯ ನೊರೆಯಿಂದ ಬರುತ್ತಿದ್ದ ಕೆಟ್ಟ ವಾಸನೆ ನನ್ನ ಮೂಗಿನ ಹೊಳ್ಳೆಗಳಿಗೆ ತಲುಪಿದಾಗ, ನನ್ನ ಆತ್ಮ ಕಂಪಿಸುತ್ತಿತ್ತು.

ಅಂದು ನಾನು ಭಾಗುವನ್ನು ನನ್ನ ಜೊತೆ ಕರೆದುಕೊಂಡು ಹೋಗಿ ಕ್ವಾರಂಟೈನ್‌ನಲ್ಲಿ ಸಾಕಷ್ಟು ಕೆಲಸ ಮಾಡಿದೆ. ರೋಗಿಯ ಹತ್ತಿರ ಹೋಗಿ ಮಾಡಬೇಕಾದ ಕೆಲಸವನ್ನು ನಾನು ಭಾಗುವಿನಿಂದ ಮಾಡಿಸುತ್ತಿದ್ದೆ; ಅವನು ಅದನ್ನು ಬಹಳ ಆತ್ಮವಿಶ್ವಾಸದಿಂದ, ನೀಟಾಗಿ ಮಾಡುತ್ತಿದ್ದ. ನಾನು ರೋಗಿಗಳಿಂದ ದೂರವೇ ಇರುತ್ತಿದ್ದೆ. ಏಕೆಂದರೆ ನಾನು ಸಾವಿಗೆ ತುಂಬಾ ಹೆದರುತ್ತಿದ್ದೆ; ಕ್ವಾರಂಟೈನ್‌ಗಂತೂ ಇನ್ನೂ ಹೆಚ್ಚು ಹೆದರುತ್ತಿದ್ದೆ.

ಆದರೆ ಈ ಭಾಗು ಸಾವು ಮತ್ತು ಕ್ವಾರಂಟೈನ್ ಎರಡನ್ನೂ ನಿಭಾಯಿಸುತ್ತಿದ್ದನೆ?

ಅವತ್ತು ಸುಮಾರು ನಾನೂರು ರೋಗಿಗಳು ಕ್ವಾರಂಟೈನ್‌ಗೆ ದಾಖಲಾದರು ಮತ್ತು ಇನ್ನೂರೈವತ್ತು ಜನ ಗುಣವಾದರು!

ಭಾಗುವಿನ ಧೈರ್ಯದ ದಯೆಯಿಂದಾಗಿ ನಾನು ಅನೇಕ ರೋಗಿಗಳಿಗೆ ಚಿಕಿತ್ಸೆ ನೀಡಿ ಅವರನ್ನು ಗುಣಮುಖರನ್ನಾಗಿಸಿದೆ. ಗುಣಮುಖರಾದ ರೋಗಿಗಳ ಸಂಖ್ಯೆ ಬಹಳ ವೇಗವಾಗಿ ಏರತೊಡಗಿತು. ಮುಖ್ಯ ವೈದ್ಯಕೀಯ ಆರೋಗ್ಯಾಧಿಕಾರಿಯ ಕೋಣೆಯಲ್ಲಿದ್ದ ಅಂಕಿಅಂಶಗಳ ಮ್ಯಾಪಿನಲ್ಲಿ, ನಾನು ತಪಾಸಣೆ ಮಾಡಿ ಗುಣಮುಖರಾದ ರೋಗಿಗಳ ಆರೋಗ್ಯದ ಸರಾಸರಿ ಶ್ರೇಣಿಯ ಗೆರೆ ಮೇಲ್ಮುಖವಾಗಿ ಜಿಗಿಯತೊಡಗಿತು. ಒಂದಲ್ಲ ಒಂದು ನೆಪ ಮಾಡಿ ನಾನು ಆ ಕೋಣೆಗೆ ಹೋಗುತ್ತಿದ್ದೆ ಮತ್ತು ನೂರಕ್ಕೆ ಏರುತ್ತಿದ್ದ ಆ ಗೆರೆಯನ್ನು ನೋಡಿ ಒಳಗೊಳಗೆ ಖುಷಿಪಡುತ್ತಿದ್ದೆ.

ಒಂದು ದಿನ ನಾನು ಅತಿಯಾಗಿ ಬ್ರಾಂಡಿ ಸೇವಿಸಿದೆ. ನನ್ನ ಹೃದಯ ಜೋರಾಗಿ ಬಡಿಯತೊಡಗಿತು. ನಾಡಿ ಮಿಡಿತ ಕುದುರೆಯಂತೆ ಜಿಗಿಯತೊಡಗಿತು; ನಾನು ಹುಚ್ಚನಂತೆ ಅತ್ತ ಇತ್ತ ತಿರುಗಾಡಲಾರಂಭಿಸಿದೆ. ಕೊನೆಗೆ, ಪ್ಲೇಗ್‌ನ ವೈರಾಣು ನನ್ನೊಳಗೆ ಹೊಕ್ಕುಬಿಟ್ಟಿದೆ; ಸದ್ಯದಲ್ಲೇ